**<u>ಪ್ರಧಾನ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ</u>**

**ಸಿ.ಸಿ. ನಂ. 89/2023**

| | | | |
|---|---|---|---|
| **ಹೆಸರು** | **:** | **ಶರಣಮ್ಮ ಭಜಂತ್ರಿ** | **ಚಾ.ಸಾ.-1** |
| **ಗಂಡನ ಹೆಸರು** | **:** | **ಶಿವಾನಂದ** | **ಪ್ರಾ.ಸಾ. 1** |
| **ವಯಸ್ಸು** | **:** | **30 ವರ್ಷ** | **ದಿನಾಂಕಃ 28-12-2023** |
| **ಉದ್ಯೋಗ** | **:** | **ಅಬಕಾರಿ ನಿರೀಕ್ಷಕರು** | |
| **ವಾಸಸ್ಥಳ** | **:** | **ಬೀದರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 01-08-2022 ರಿಂದ 19-12-2023 ರವರೆಗೆ ನಾನು ಚಿಂಚೋಳಿ ಅಬಕಾರಿ ವಲಯದಲ್ಲಿ ಉಪ-ನಿರೀಕ್ಷಕಳಾಗಿ ಕೆಲಸ ಮಾಡಿದ್ದೆ.

ದಿನಾಂಕ 26-08-2022 ರಂದು ಬೆಳಿಗ್ಗೆ 06-00 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ಬಾತ್ಮಿದಾರರು ನನಗೆ ಕರೆ ಮಾಡಿ ಹಲಕೋಡಾ ಗ್ರಾಮದ ಪೆಂಟಯ್ಯ ಎಂಬಾತ ತನ್ನ ಮನೆಯಲ್ಲಿ ಕಲಬೇರಿಕೆ ಸೇಂದಿ ತಯಾರಿಸಿ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಕೊಟ್ಟ ಮೇರೆಗೆ ನಾನು ನಮ್ಮ ಸಿಬ್ಬಂದಿ ಚಾಸಾ-4 ಮತ್ತು 5 ರವರಿಗೆ ಕರೆ ಮಾಡಿ ಕಚೇರಿಗೆ ಬರುವಂತೆ ಹೇಳಿ ನಾನು ಸಹ ತಕ್ಷಣ ಕಚೇರಿಗೆ ಬಂದೆ.  ನಂತರ ಚಾಸಾ-4 ಮತ್ತು 5 ರವರೊಂದಿಗೆ ಕೆಎ-32 ಜಿ-1202 ರಲ್ಲಿ ಹಲಕೋಡಾ ಗ್ರಾಮಕ್ಕೆ ಹೋಗುವ ಸಲುವಾಗಿ ಹೊರಟು ಚಿಂಚೋಳಿ ಪಟ್ಟಣದ ಬಸವೇಶ್ವರ ಸರ್ಕಲ್ ಬಳಿ ಬಂದು ಅಲ್ಲಿ ವಾಯುವಿವಾರ ಮಾಡುತ್ತಿದ್ದ ಚಾಸಾ-2 ಮತ್ತು 3 ರವರನ್ನು ಕರೆದು ಅವರಿಗೆ ಬಾತ್ಮಿ ವಿಚಾರವನ್ನು ತಿಳಿಸಿ ದಾಳಿ ಸಂದರ್ಭದಲ್ಲಿ ಪಂಚರಾಗಿ ಹಾಜರಿರಬೇಕೆಂದು ಕೋರಿಕೊಂಡಿದ್ದನ್ನು ಸದರಿಯವರು ಒಪ್ಪಿಕೊಂಡ ಮೇರೆಗೆ ಅವರನ್ನು ನಮ್ಮ ಜೊತೆ ಕರೆದುಕೊಂಡು ಹಲಕೋಡಾ ಗ್ರಾಮಕ್ಕೆ ಬೆಳಿಗ್ಗೆ 06-20 ಗಂಟೆಗೆ ಬಂದು ಸದರಿ ಗ್ರಾಮದ ಸಿಸಿ ರಸ್ತೆಯಲ್ಲಿ ನಮ್ಮ ವಾಹನವನ್ನು ನಿಲ್ಲಿಸಿದೆವು.

ನಾವು ವಾಹನ ನಿಲ್ಲಿಸಿದ್ದ ರಸ್ತೆಯ ಪಕ್ಕದಲ್ಲಿದ್ದ ಮನೆಗಳ ಪೈಕಿ ಒಂದು ಮನೆಯಿಂದ ಒಬ್ಬ ವ್ಯಕ್ತಿ ಹೊರಗೆ ಬಂದು ಮುಖ್ಯ ರಸ್ತೆ ಕಡೆಗೆ ಹೋಗುತ್ತಿದ್ದ. ನಾವು ವಾಹನ ನಿಲ್ಲಿಸಿದ್ದ ರಸ್ತೆಯ ಪಕ್ಕದಲ್ಲಿದ್ದ ಮತ್ತೊಂದು ಮನೆಯಲ್ಲಿದ್ದ ವ್ಯಕ್ತಿಯನ್ನು ಪೆಂಟಯ್ಯ ಎಂಬಾತನ ಮನೆ ಯಾವುದು ಎಂದು ಕೇಳಲಾಗಿ ಸದರಿ ವ್ಯಕ್ತಿ ನಮ್ಮ ಮುಂದೆ ವ್ಯಕ್ತಿಯೊಬ್ಬ ಹೊರಗೆ ಬಂದ ಮನೆಯ ಕಡೆ ಕೈ ಮಾಡಿ ತೋರಿಸಿ ಸದರಿ ಮನೆ ಪೆಂಟಯ್ಯನಿಗೆ ಸೇರಿದ್ದು ಎಂದು ತಿಳಿಸಿದ. ಅದರಂತೆ ನಾನು ಮತ್ತು ಸಿಬ್ಬಂದಿ ಪಂಚರ ಸಮಕ್ಷಮ ಪೆಂಟಯ್ಯನ ಮನೆಗೆ ಬಂದು ನೋಡಲಾಗಿ ಸದರಿ ಮನೆಯಲ್ಲಿ ಯಾರೂ ಇರಲಿಲ್ಲ. ನನಗೆ ಬಂದ ಬಾತ್ಮಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪಂಚರ ಸಮಕ್ಷಮ ಶೋಧನಾ ಸಮುಚಿತ ಪತ್ರವನ್ನು ತಯಾರಿಸಿಕೊಂಡು ಪೆಂಟಯ್ಯನ ಮನೆಯ ಒಳಗೆ ಹೋಗಿ ನೋಡಲಾಗಿ ಸದರಿ ಮನೆಯ ಎಡಭಾಗದ ಕೋಣೆಯಲ್ಲಿ ಸುಮಾರು 10 ಲೀಟರ ಸಾಮರ್ಥ್ಯದ ಪ್ಲಾಸ್ಟಿಕ ಕೊಡದಲ್ಲಿ ಅಂದಾಜು 7 ಲೀಟನಷ್ಟು ಬಿಳಿ ದ್ರಾವಣ ಇರುವುದು ಕಂಡು ಬಂತು. ಸದರಿ ದ್ರಾವಣವನ್ನು ಮೂಸಿ ನೋಡಲಾಗಿ ಅದು ಕಲಬೇರಿಕೆ ಸೇಂದಿ ಎಂದು ಖಚಿತವಾಯಿತು. ಸದರಿ ಮನೆಯನ್ನು ಶೋಧಿಸುವ ಕಾಲಕ್ಕೆ ಟಿ.ವಿ. ಇಡುವ ಜಾಗದ ಮೇಲೆ ಅಧಾರ ಪ್ರತಿ ಸಿಕ್ಕಿದ್ದು ಅದು ಪೆಂಟಯ್ಯ ತಂದೆ ಭೀಮಯ್ಯ ಗುತ್ತೆದಾರ ಎಂಬಾತನಿಗೆ ಸೇರಿದ್ದರಿಂದ ಬಾತ್ಮಿದಾರರು ನನಗೆ ಕೊಟ್ಟ ಮಾಹಿತಿ ಖಚಿತವಾಯಿತು.

ನಂತರ ಪೆಂಟಯ್ಯನ ಮನೆಯಲ್ಲಿ ಸಿಕ್ಕ ಕಲಬೇರಿಕೆ ಸೇಂದಿಯನ್ನು ಪಂಚರ ಸಮಕ್ಷಮ ಜಪ್ತು ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಸುಮಾರು ಒಂದು ಲೀಟರ್ ಸೇಂದಿಯನ್ನು ಖಾಲಿ ನೀರಿನ ಬಾಟಲಿನಲ್ಲಿ ಸಂಗ್ರಹಿಸಿ ಅದನ್ನು ಬಿಳಿ ಬಟ್ಟೆಯಿಂದ ಸುತ್ತಿ ಅರಗಿನಿಂದ ಸೀಲ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 07-00 ರಿಂದ 08-00 ಗಂಟೆವರೆಗೆ ಜರುಗಿಸಿರುತ್ತೇನೆ. ಆರೋಪಿ ಪೆಂಟಯ್ಯನಿಗಾಗಿ ಆತನ ಮನೆಯ ಆಜು-ಬಾಜು ಹುಡುಕಲಾಗಿ ಆತನ ಸುಳಿವು ಸಿಕ್ಕಿರುವುದಿಲ್ಲ.

ಆನಂತರ ಜಪ್ತಿ ಮಾಡಲಾದ ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಬೆಳಿಗ್ಗೆ 08-20 ಗಂಟೆ ಸುಮಾರಿಗೆ ಕಚೇರಿಗೆ ವಾಪಸ್ಸಾಗಿ ಸ್ವ-ಪಿರ್ಯಾದನ್ನು ತಯಾರಿಸಿಕೊಂಡು ಆರೋಪಿ ಪೆಂಟಯ್ಯನ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದನ್ನು ಮಾನ್ಯ ನ್ಯಾಯಾಲಯ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ.

ಸ್ವ-ಪಿರ್ಯಾದಿ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನೀಗ ನಿಪಿ-1 ಎಂದು ಗುರುತಿಸಲಾಯಿತು.

ನಿಪಿ-1 ರ ಆಧಾರದ ಮೇಲೆ ದಾಖಲಿಸಿಕೊಂಡಿದ್ದ ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು

ಅದನ್ನೀಗ ನಿಪಿ-2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಆರೋಪಿ ಮನೆ ಶೋಧನೆಗೆ ಮೊದಲು ತಯಾರಿಸಿಕೊಂಡಿದ್ದ ಶೋಧನಾ ಪತ್ರವನ್ನು ಈಗ ನೋಡುತ್ತಿದ್ದು ಅದನ್ನೀಗ ನಿಪಿ-3 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನೀಗ ನಿಪಿ-4 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಮಾದರಿ ಸೀಲು ಪತ್ರ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನೀಗ ನಿಪಿ-5 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ಆರೋಪಿ ಮನೆಯಲ್ಲಿ ಸಿಕ್ಕಿದ್ದ ಆಧಾರ ಕಾರ್ಡ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-6 ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಸೇಂದಿ ಸಂಗ್ರಹಿಸಲು ಬಳಸಿದ್ದ ನೀರಿನ ಖಾಲಿ ಬಾಟಲನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಮತ್ತು ಒಂದು ಲೀಟರ ಸಾಮರ್ಥ್ಯದ ಖಾಲಿ ಬಾಟಲಿಯನ್ನು ಮು.ಮಾ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿ ಕಾಲವಕಾಶ ಕೋರಿದ್ದರಿಂದ ಮತ್ತು ನ್ಯಾಯದ ದೃಷ್ಟಿಯಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**